





### ಗೂಡಿನೊಂದಿಗೆ ಕುಡಿಯಲು ನೀರು

ಚಿಕ್ಕಬಳ್ಳಾಪುರದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಬಡಾವಣೆಗಳಲ್ಲಿ 'ಎಚ್‌ಎಸ್‌ ಗಾರ್ಡನ್' ಸಹ ಒಂದು. ಬಹುಮಹಡಿ ಕಟ್ಟಡಗಳ ನಡುವೆಯೂ ಇಲ್ಲಿ ತೋಟಗಳಿವೆ. ಮನೆಗಳ ಬಳಿ ಗಿಡ–ಮರಗಳಿವೆ. ಆದರೆ ಈ ಗಿಡ ಮರಗಳಿಗಿಂತ ಗುಬ್ಬಿಗಳು ಹೆಚ್ಚು ಆಶ್ರಯಿಸಿರುವುದು ಕೃತಕ ಗೂಡುಗಳನ್ನು; ಮನೆ ಮಾಲೀಕರು ಇಟ್ಟಿರುವ ರಟ್ಟಿನ ಬಾಕ್ಸ್‌ಗಳನ್ನು. ಗುಬ್ಬಿಗಳಿಗೆ ಗೂಡು ಇಟ್ಟಿರುವ ಮನೆಗಳ ಮಾಲೀಕರು ಬೇಸಿಗೆಯ ದಿನಗಳಲ್ಲಿ ನೀರನ್ನೂ ಇರಿಸುವುದು ವಿಶೇಷ.

ಎಚ್‌.ಎಸ್‌ ಗಾರ್ಡನ್‌ನಲ್ಲಿ ಮಂಗಗಳ ಹಾವಳಿ ಹೆಚ್ಚಿದೆ. ಗುಬ್ಬಿ ಗೂಡುಗಳಿಗೂ ಸಂಚಕಾರ ಎದುರಾಗಿದೆ. ಗೂಡುಗಳನ್ನು ಮಂಗಗಳು ಕೆಳಗೆ ಬೀಳಿಸುತ್ತಿವೆ. ಇದರಿಂದ ಗೂಡಿನೊಳಗಿದ್ದ ಮರಿಗಳ ಪ್ರಾಣಕ್ಕೂ ಸಂಚಕಾರ.

ಬಹುತೇಕ ಮನೆಗಳಲ್ಲಿ ಗುಬ್ಬಿಗಳಿಗೆ ಗೂಡು ಇಡಲಾಗಿದೆ.

ರಟ್ಟಿನ ಬಾಕ್ಸ್‌ಗಳು, ಡಬ್ಬಗಳು, ಪ್ಲೈವುಡ್‌ನಿಂದ ಕೃತಕವಾಗಿ ರೂಪಿಸಿದ ಗೂಡುಗಳನ್ನು ಗುಬ್ಬಿಗಳಿಗಾಗಿಯೇ ಇಟ್ಟಿದ್ದಾರೆ. ಬಡವರ ಸಣ್ಣ ಸೂರಿನಿಂದ ಹಿಡಿದು ಸಿರಿವಂತರ ಮನೆಯ ಆವರಣಗಳಲ್ಲೂ ಗುಬ್ಬಿಗೂಡುಗಳಿವೆ. ಮನೆಯ ಮಾಲೀಕರು ಇಟ್ಟಿರುವ ಪೆಟ್ಟಿಗೆಗಳೊಳಗೆ ಬೆಚ್ಚನೆಯ ಹುಲ್ಲಿನ ಸೂರು ಕಟ್ಟಿಕೊಂಡು ಗುಬ್ಬಿಗಳು ಸಂತತಿ ಬೆಳೆಸುತ್ತಿವೆ. ಜನರ ಈ ಕಾಳಜಿಯಿಂದ ಕೆಳಗಿನ ತೋಟದಲ್ಲಿ ಗುಬ್ಬಿಗಳು ಹಿಂಡುಹಿಂಡಾಗಿವೆ.

ಕೆಳಗಿನ ತೋಟದಲ್ಲಿ ಈ ಹಿಂದೆ ಒಮ್ಮೆ ಮೊಬೈಲ್ ಟವರ್ ಅಳವಡಿಸಲು ಫೋನ್ ಕಂಪನಿಯವರು ಮುಂದಾಗಿದ್ದರು. ಆಗ ಜನರೆಲ್ಲರೂ ಒಗ್ಗೂಡಿ ಟವರ್ ನಿರ್ಮಾಣ ವಿರೋಧಿಸಿದ್ದರು. ಆ ವಿರೋಧಕ್ಕೆ ಕಾರಣ ಗುಬ್ಬಿಗಳ ಮೇಲಿನ ಪ್ರೀತಿ. ಇಂದಿಗೂ ಕೆಳಗಿನ ತೋಟದ ಕೆಲವು ಕಡೆಗಳಲ್ಲಿ ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಇದೆ. ಈ ಬಗ್ಗೆ ಸಂಬಂಧಿಸಿದ ಕಂಪನಿಯ ಸ್ಥಳೀಯ ಅಧಿಕಾರಿಗಳಲ್ಲಿ ದೂರಿದರೆ, 'ಎಚ್‌.ಎಸ್‌. ಗಾರ್ಡನ್‌ನಲ್ಲಿ ಮೊಬೈಲ್ ಟವರ್ ಅಳವಡಿಸಲು ಯಾರೂ ಜಮೀನು ಕೊಡಲ್ಲ' ಎನ್ನುತ್ತಾರೆ.

ಗುಬ್ಬಿಗಳಿಗೆ ಗೂಡು ಇಟ್ಟಿರುವ ಮನೆಗಳನ್ನು ಮಾತನಾಡಿಸಿದರೆ, ಗುಬ್ಬಿಗಳಿಗೆ ಸಂಬಂಧಿಸಿದಂತೆ ಒಂದೊಂದು ಪ್ರಸಂಗಗಳು ಬಿಚ್ಚಿಕೊಳ್ಳುತ್ತವೆ. ಗುಬ್ಬಿಗಳು ಇದು 'ನಮ್ಮ ಮನೆ' ಎನ್ನುವಷ್ಟು ನಿರಾಳ ಮತ್ತು ನಿರಾತಂಕವಾಗಿ ಮನೆಗಳ ಒಳ ಹೊಕ್ಕು ಬರುತ್ತವೆ.

ಎರಡು ಮೂರು ದಿನಗಳ ಕಾಲ ಮನೆಗೆ ಬೀಗ ಹಾಕಿ ಹೊರ ಹೋಗಬೇಕಾದರೆ ಇಲ್ಲಿನ ನಿವಾಸಿಗಳು 'ಮನೆಯೊಳಗೆ ಗುಬ್ಬಿಗಳು ಇಲ್ಲ' ಎನ್ನುವುದನ್ನು ಖಾತರಿಪಡಿಸಿಕೊಂಡೇ ಬೀಗ ಹಾಕುವುದು.

ಒಮ್ಮೆ ಕುಟುಂಬವೊಂದು ಮನೆಗೆ ಬೀಗ ಹಾಕಿಕೊಂಡು ಒಂದು ವಾರ ಹೊರ ಹೋಗಿತ್ತು. ವಾಪಸ್ ಬಂದಾಗ ಮಲಗುವ ಕೋಣೆಯಲ್ಲಿ ಗುಬ್ಬಿಯೊಂದು ಸತ್ತುಬಿದ್ದಿತ್ತು. ನಿತ್ಯದಂತೆ ಮನೆಯ ಹಾಲ್‌ಗೆ ಬಂದು ಆಟವಾಡುತ್ತಿದ್ದ ಗುಬ್ಬಿ ಕೋಣೆ ಸೇರಿದೆ. ಅದು ಕುಟುಂಬದ ಯಾರೊಬ್ಬರ ಗಮನಕ್ಕೂ ಬಾರದೆ ಬೀಗ ಹಾಕಿಕೊಂಡು ಹೊರಹೋಗಿದ್ದಾರೆ. ಇದರಿಂದಾಗಿ ಜೀವ ಕಳೆದುಕೊಂಡ ಗುಬ್ಬಚ್ಚಿಯ ಸಾವಿಗೆ ಕುಟುಂಬದವರೆಲ್ಲ ಮರುಗಿದರು. ಈಗ ಮನೆಗೆ ಬೀಗ ಹಾಕುವ ಮುನ್ನ 'ಮನೆಯೊಳಗೆ ಗುಬ್ಬಿಗಳು ಇವೆಯೇ' ಎನ್ನುವುದನ್ನು ಜನ ಖಾತರಿಪಡಿಸಿಕೊಳ್ಳುತ್ತಿದ್ದಾರೆ.

ಎಚ್‌.ಎಸ್‌. ಗಾರ್ಡನ್ ನಿವಾಸಿಗಳ ಗುಬ್ಬಚ್ಚಿಗಳ ಕುರಿತ ಪ್ರೀತಿ ಹೊರಗಿನವರಿಗೆ ಅಚ್ಚರಿಯ ವಿದ್ಯಮಾನವಾದರೆ, ಸ್ಥಳೀಯರಿಗದು ಸಾಮಾನ್ಯ ವಿಚಾರ.

ಪ್ರತಿಕ್ರಿಯಿಸಿ: feedback@sudha.co.in